DW :2

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## **OS No.**38/2020

| | | |
|---|---|---|
| ಸಾಕ್ಷಿದಾರರ ಹೆಸರು | : | ಎಸ್ ಗಣೇಶ್ ಪ್ರಭು |
| ತಂದೆಯ ಹೆಸರು | : | ರಾಮಣ್ಣ ಪ್ರಭು |
| ಪ್ರಾಯ | : | 59 |
| ಉದ್ಯೋಗ | : | ಚಾಲಕ ವೃತ್ತಿ |
| ವಾಸಸ್ಥಳ | : | ಶೆಟ್ಟಿ ಮಜಲು ಮನೆ, ಪುರುಷರ ಕಟ್ಟೆ , ನರಿಮೊಗರು ಗ್ರಾಮ |
| ದಿನಾಂಕಃ 05.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯವಿಚಾರಣೆ 1, 4 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ. ಎಸ್. ಜಿ. ಎಂ. ವಕೀಲರಿಂದಃ**

ನನಗೆ ಕುಸುಮಾ ಶೆಟ್ಟಿ ಯವರ ಪರಿಚಯವಿದೆ. ಸದರಿಯವರು ನನಗೆ 25-30 ವರ್ಷಗಳಿಂದ ಮನೆಯ ನೆರೆಕೆರೆಯವರಾಗಿದ್ದರಿಂದ ಪರಿಚಯವಾಗಿರುತ್ತಾರೆ. ಅವರು ಮಾಡಿದ ವಿಲ್ ನ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿ ವಿಲ್ ನ್ನು ಮಾರ್ಚ್ 2017 ರಲ್ಲಿ ಮಾಡಿರುತ್ತಾರೆ. ಸದರಿ ವಿಲ್ ಮಾಡುವ ವಿಚಾರವಾಗಿ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿ ನಿಪಿ14 ವಿಲ್ ನ್ನು ನೋಡಿ ಅದರ ಎಲ್ಲಾ ಪುಟಲ್ಲಿರುವ ಕುಸುಮಾ ಶೆಟ್ಟಿಯವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು **ನಿಪಿ14(ಎ)** ಯಿಂದ **(ಜಿ)** ಎಂದು ಗುರುತಿಸಲಾಯಿತು. ಸದರಿ ವಿಲ್ ನಾಮೆಗೆ ಒಂದು ವಾರದ ಮುಂಚೆ ನನ್ನನ್ನು ಸಾಕ್ಷಿಯಾಗಿ

ರಾಕೇಶ್ ಮಸ್ಕರೇನಸ್ ವಕೀಲರ ಕಚೇರಿಗೆ ಬರಲು ಹೇಳಿರುತ್ತಾರೆ. ಸದರಿ ಕಚೇರಿಯು ಗೋಪಾಲಕೃಷ್ಣ ಎಂಬ ನೋಟರಿ ವಕೀಲರ ಕಚೇರಿಯ ಮಾಳಿಗೆಯಲ್ಲಿ ಗಜಾನನ ಟವರ್ಸ್ ನಲ್ಲಿ ಇದೆ. ಸದರಿ ದಿನ ನಾನು ವಕೀಲರ ಕಚೇರಿಗೆ ಬೆಳಿಗ್ಗೆ 10 ಗಂಟೆಗೆ ಹೋಗಿದ್ದೆ. ಹಾಗೆ ನಾನು ಹೋದಾಗ ಅಲ್ಲಿ ವಿಲ್ ನ್ನು ತಯಾರಾಗಿತ್ತು. ನಾನು ಹೋದಾಗ ಕುಸುಮಾ ಮತ್ತು ಇನ್ನೊಬ್ಬ ಸಾಕ್ಷಿದಾರರಾದ ಹೈದರಾಲಿ ಇದ್ದರು. ನಂತರ ವಿಲ್ ನ್ನು ವಕೀಲರು ನನಗೆ, ಕುಸುಮಾ ಮತ್ತು ಹೈದರಾಲಿಯವರಿಗೆ ವಿಲ್ ನ್ನು ಓದಿ ಹೇಳಿರುತ್ತಾರೆ. ನಾನು, ಕುಸುಮಾ ರವರು ಸದರಿ ವಿಲ್ ನ್ನು ಓದಿ ನೋಡಿರುತ್ತೇವೆ. ಓದಿ ನೋಡಿದ ನಂತರ ಕುಸುಮಾರವರು ವಿಲ್ ಗೆ ಸಹಿ ಮಾಡಿರುತ್ತಾರೆ. ಆ ನಂತರ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ನನ್ನ ನಂತರ ಹೈದರಾಲಿಯವರು ಸಹಿ ಮಾಡಿದ್ದು, ನಂತರ ವಕೀಲರ ಸಹಿ ಮಾಡಿರುತ್ತಾರೆ. ನಂತರ ನೊಂದಣಿ ಕಚೇರಿಗೆ ಹೋಗಿರುತ್ತೇವೆ. ನೊಂದಣಿ ಕಚೇರಿಯಲ್ಲಿ ವಿಲ್ ನ್ನು ಕಚೇರಿಯ ಸಿಬ್ಬಂದಿ ಅದನ್ನು ಓದಿ ಹೇಳಿರುತ್ತಾರೆ. ಹಾಗೆ ಓದಿದ್ದನ್ನು ಕುಸುಮಾರವರು ಕೇಳಿ, ಒಪ್ಪಿಕೊಂಡಿರುತ್ತಾರೆ. ವಿಲ್ ನ ಮೇಲೆ ಇರುವ ಸಾಕ್ಷಿದಾರರ ಸಹಿಯನ್ನು **ನಿಪಿ14(ಎಚ್)**, ಎಂದು ನೊಂದಣಿ ಸಮಯ ಸಾಕ್ಷಿದಾರರು ಮಾಡಿದ ಸಹಿಯನ್ನು **ನಿಪಿ14(ಐ)** ಎಂದು ಗುರುತಿಸಲಾಯಿತು. ವಿಲ್ ನ್ನು ನಿಖಿಲ್ ರೈ ಮತ್ತು ನಿಧಿ ಎಂಬುವವರ ಹೆಸರಿಗೆ ಕುಸುಮಾ ಶೆಟ್ಟಿರವರು ಬರೆದಿರುತ್ತಾರೆ.

**ಪಾಟಿಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**
ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು